**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸೆಷನ್ಸ್ ಕೇಸ ನಂಃ 398/2019

ಪಿಡಬ್ಲು :2 ಸಿಡಬ್ಲು :3

| | |
|---|---|
| ಸಾಕ್ಷಿಯ ಹೆಸರು | : ಶ್ರೀ.ಅಮಿತ ಉಗಾರೆ |
| ಗಂಡನ ಹೆಸರು | : ಶ್ರೀ.ನಿಂಗಪ್ಪ ಉಗಾರೆ |
| ವಯಸ್ಸು | : 25 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸ್ತವ್ಯ | : ಶೆಡಬಾಳ |
| ದಿನಾಂಕ | : 05-03-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 2 ಶ್ರವಣ ನಾಯಿಕ ನನಗೆ ಗೊತ್ತಿರುತ್ತಾರೆ. ಅವರು ನಮ್ಮ ಊರಿನವರು. ನಮ್ಮ ಮನೆಯಿಂದ ಅವರ ಮನೆಗೆ 300 ಮೀಟರ ದೂರ ಇದೆ. ಚಾಸಾಃ 1 ಮಹಾದೇವಿ ನನಗೆ ಗೊತ್ತಿರುತ್ತಾರೆ. ನಮ್ಮ ಮನೆಯಿಂದ ಅವರ ಮನೆಗೆ 100 ಮೀಟರ ದೂರ ಇದೆ. ಚಾಸಾಃ 7 ಚಿದಾನಂದ ಅವರು ನಮ್ಮ ಊರಿನವರು. ಅವರ ಮನೆ ನಮ್ಮ ಮನೆಯಿಂದ 250 ಮೀಟರ ದೂರದಲ್ಲಿದೆ.

2. ಮಹಾದೇವಿ ನಾಯಿಕ ಅವರು ನನ್ನನ್ನು ಕರೆದರು. ಕಾಗವಾಡ ಪೋಲಿಸರು ಬಂದಿದ್ದರು. ಮಹಾದೇವಿ ಅವರ ಮನೆ ಬಳಿ ನನ್ನ ಸಹಿ ಮಾಡಿಸಿಕೊಂಡು ಪೋಟೋ ತೆಗೆದರು. ಚಾಸಾಃ 7 ಚಿದಾನಂದ ಮಗದುಮ್ ಮತ್ತು ಚಾಸಾಃ 1 ಮಹಾದೇವಿ ಅವರು ಮಹಾದೇವಿ ಅವರ ಮನೆ ಬಳಿ ಇದ್ದರು. ಚಾಸಾಃ 1 ಮಹಾದೇವಿ ಅವರ ಮನೆಯ ಬಳಿ

ಮಾತ್ರ ಪೋಲಿಸರು ಪೋಟೋ ತೆಗೆದಿದ್ದಾರೆ. ಯಾವ ಕಾರಣಕ್ಕೆ ನನ್ನ ಸಹಿ ಮಾಡಿಸಿಕೊಂಡರು ಎಂದು ಪೋಲಿಸರು ನನಗೆ ಹೇಳಿರುವುದಿಲ್ಲ. ಸ್ಥಳದಲ್ಲಿ ವಸ್ತುವನ್ನು ತೆಗೆದುಕೊಂಡ ವಿಚಾರ ನನಗೆ ಗೊತ್ತಿರುವುದಿಲ್ಲ. ಪೋಲಿಸರು ಆ ದಿನ ನನ್ನ ಒಂದು ಅಥವಾ ಎರಡು ಸಹಿಗಳನ್ನು ತೆಗೆದುಕೊಂಡಿರಬಹುದು.

3. ಚಾಸಾಃ 1 ಮಹಾದೇವಿ ಅವರ ಮನೆಯ ಮುಂದೆ ತಾನು ಮಾಡಿದ ಸಹಿಗಳೆಂದು ಎರಡು ದಾಖಲೆಗಳ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಆ ದಾಖಲೆಗಳು ಘಟನಾ ಸ್ಥಳದ ಪಂಚನಾಮೆ ಆಗಿರುತ್ತವೆ. ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಘಟನಾ ಸ್ಥಳದ ಒಂದನೇ ಪಂಚನಾಮೆಯನ್ನು ನಿಪಿ-6 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-6 [ಎ] ಎಂದು ಗುರುತಿಸಲಾಯಿತು. ಘಟನಾ ಸ್ಥಳದ ಎರಡನೇ ಪಂಚನಾಮೆಯನ್ನು ನಿಪಿ-7 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-7 [ಎ] ಎಂದು ಗುರುತಿಸಲಾಯಿತು. ನಿಪಿ-6 ಮತ್ತು ನಿಪಿ-7 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ಪೋಲಿಸರು ನನ್ನ ಸಮಕ್ಷಮ ಪಂಚನಾಮೆ ಮಾಡಿರುವುದಿಲ್ಲ. ಪೋಲಿಸರು ಆ ದಿನ ತೆಗೆದ ಪೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಎರಡು ಪೋಟೋಗಳಲ್ಲಿ ಸಾಕ್ಷಿ ತಮ್ಮ ಇರುವಿಕೆಯನ್ನು ಗುರುತಿಸಿದ್ದಾರೆ. ಅವುಗಳನ್ನು ಈಗಾಗಲೇ ನಿಪಿ-2 ಮತ್ತು ನಿಪಿ-3 ಎಂದು ಗುರುತಿಸಲಾಗಿದೆ. ಪೋಟೋದಲ್ಲಿ ಕಾಣುವ ಮನೆ ಚಾಸಾಃ 1 ಮಹಾದೇವಿ ವಸಂತ ನಾಯಕ ಅವರ ಮನೆ ಎಂದು ಗುರುತಿಸಿದ್ದಾರೆ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಪಂಚನಾಮೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀ ಸವಾಲು: ವಿಶೇಷ ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ 24-07-2019 ರ ಪೋಲಿಸ ನೋಟಿಸಿನ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಪೋಲಿಸ ನೋಟಿಸನ್ನು ನಿಪಿ-8 ಎಂದು, ಅದರ ಮೇಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-8 [ಎ] ಎಂದು ಗುರುತಿಸಲಾಯಿತು. ಪೋಲಿಸರು ನೀಡಿದ ನೋಟಿಸಿನ ಅನ್ವಯ ನಾನು ದಿನಾಂಕಃ 25-07-2019 ರಂದು ಚಾಸಾಃ 7 ಚಿದಾನಂದ ಮಗದುಮ್ ಅವರ ಮನೆಯ ಬಳಿ ಬೆಳಗ್ಗೆ 9:00 ಗಂಟೆಗೆ ಹೋಗಿದ್ದೇನು ಎನ್ನುವುದಕ್ಕೆ ಸಾಕ್ಷಿ ನನಗೆ ದಿನಾಂಕ ಮತ್ತು ಸಮಯ ನನಗೆ ಗೊತ್ತಿಲ್ಲ ಆದರೆ ಹೋಗಿದ್ದೇನು ಎಂದು ಹೇಳಿದ್ದಾರೆ.

2. ದಿನಾಂಕಃ 15-07-2019 ರಂದು ರಾತ್ರಿ 8:30 ರ ಸಮಯದಲ್ಲಿ ಆರೋಪಿತರು ಚಿದಾನಂದ ಅವರ ಮನೆಗೆ ಹೋಗಿ ಮಹಾದೇವಿ ಮತ್ತು ಚಿದಾನಂದ ಅವರುಗಳ ಮೇಲೆ ಹಲ್ಲೆ ಮಾಡಿದ ಜಾಗ ಎಂದು ಚಿದಾನಂದ ಅವರು ತೋರಿಸಿದ್ದು, ಆ ವಿಚಾರವಾಗಿ ಪೋಲಿಸರು ಸ್ಥಳದಲ್ಲಿ ಪಂಚನಾಮೆಯನ್ನು ಬೆಳಗ್ಗೆ 9:00-10:00 ಗಂಟೆಯವರೆಗೆ ಮಾಡಿದರು ಎನ್ನುವುದು ಸರಿಯಲ್ಲ. ಪೋಲಿಸರು ಆ ವಿಷಯವನ್ನು ನನಗೆ ತಿಳಿಸಿ ನಿಪಿ-6 ರಂತೆ ಪಂಚನಾಮೆ ಮಾಡಿ ನಿಪಿ-6 [ಎ] ಪ್ರಕಾರ ನನ್ನ ಸಹಿ ಮಾಡಿಸಿಕೊಂಡಿರುತ್ತಾರೆ ಎನ್ನುವುದು ಸರಿಯಲ್ಲ.

3. ಆ ನಂತರ ಪೋಲಿಸರು ನನ್ನನ್ನು ಮಹಾದೇವಿ ನಾಯಿಕ ಅವರ ಮನೆ ಬಳಿ ಕರೆಸಿದ್ದರು, ಅಲ್ಲಿ ಮಹಾದೇವಿ ನಾಯಿಕ ಅವರು ಹಾಜರಿದ್ದು, ದಿನಾಂಕಃ 16-07-2019 ರಂದು ರಾತ್ರಿ 9:00 ಗಂಟೆ ಸಮಯಕ್ಕೆ ಆರೋಪಿತರು ಅವರ ಮನೆಗೆ ಹೋಗಿ ಅವರ ಮೇಲೆ ಹಲ್ಲೆ ಮಾಡಿದ ಜಾಗ ಎಂದು ಪೋಲಿಸರಿಗೆ ತೋರಿಸಿದ್ದು , ಸ್ಥಳದಲ್ಲಿ ಮನೆಗೆ ಹಾಕಲಾಗಿದ್ದ ಸಿಮೆಂಟ್ ಬಾಗಿಲು ಮುರಿದು ಅದರ ಒಂದು ತುಂಡು ಅಲ್ಲಿ ಬಿದ್ದಿದ್ದು, ಅದನ್ನು ಪೋಲಿಸರು ನನ್ನ ಸಮಕ್ಷಮ ಜಪ್ತು ಮಾಡಿಕೊಂಡರು

ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ಪೋಲಿಸರು ವಿಚಾರವನ್ನು ಹೇಳಿ ನಿಪಿ–7 ರಂತೆ ಪಂಚನಾಮೆಯನ್ನು ಬೆಳಗ್ಗೆ 10:00–11:30 ರವರೆಗೆ ಮಾಡಿ ನಿಪಿ–7 [ಎ] ಪ್ರಕಾರ ಸಹಿ ಮಾಡಿಸಿಕೊಂಡರು ಎನ್ನುವುದು ಸರಿಯಲ್ಲ. ಪಂಚನಾಮೆ ಸಮಯದಲ್ಲಿ ಸಿಮೆಂಟ್ ತುಂಡನ್ನು ಮು.ಮಾ.1 ನ್ನು ಪೋಲಿಸರು ತೆಗೆದುಕೊಂಡು ಹೋದರು ಎನ್ನುವುದು ಸರಿ. ಆದರೆ ಮನೆಯ ಬಾಗಿಲು ಜಗಳದಲ್ಲಿ ಮುರಿದಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ.

4. ಚಿದಾನಂದ ಅವರ ಮನೆಯಿಂದ ಮಹಾದೇವಿ ಅವರ ಮನೆ 400–500 ಮೀಟರ ದೂರದಲ್ಲಿದೆ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿದ್ದು, ಅದರಲ್ಲಿ ತಮ್ಮ ಇರುವಿಕೆಯನ್ನು, ಪೋಲಿಸರ ಇರುವಿಕೆಯನ್ನು ಮತ್ತು ಚಾಸಾಃ 2 ಶ್ರಾವಣ ಮತ್ತು ಚಾಸಾಃ 7 ಚಿದಾನಂದ ಅವರ ಇರುವಿಕೆಯನ್ನು ಗುರುತಿಸಿದ್ದಾರೆ ಮತ್ತು ಪೋಲಿಸರು ಆ ಸ್ಥಳದಲ್ಲಿ ಸಹಿ ಮಾಡಿಸಿಕೊಂಡಿದ್ದಾರೆ ಎಂದು ಹೇಳಿದ್ದಾರೆ. ಪೋಟೋ ವಿದ್ಯುನ್ಮಾನ ದಾಖಲೆಯಾಗಿದ್ದು ಅದನ್ನು ಗುರುತಿಸುವಿಕೆಗೆ ಭಾರತ ಸಾಕ್ಷಾಧಿನಿಯಮ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರ ಲಭ್ಯ ಇಲ್ಲದೇ ಇರುವುದರಿಂದ ಅದನ್ನು ಸಾಕ್ಷಿಯಾಗಿ ಗುರುತಿಸಿರುವುದಿಲ್ಲ.

5. ನಿಪಿ–6 ಮತ್ತು ನಿಪಿ–7 ರಲ್ಲಿನ ವಿಚಾರಗಳನ್ನು ನಾನು ತಿಳಿದುಕೊಂಡು ನಿಪಿ–6 [ಎ] ಮತ್ತು ನಿಪಿ–7 [ಎ] ಪ್ರಕಾರ ಸಹಿ ಮಾಡಿದ್ದರೂ ಸಹ ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಪಾಟೀ ಸವಾಲಿಗಾಗಿ ಪ್ರಕರಣವನ್ನು ಮುಂದೂಡಲಾಯಿತು.**

**ಸಾಕ್ಷಿಯನ್ನು ಮಧ್ಯಾಹ್ನ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು: 5, 6,8 ನೇ ಆರೋಪಿತರ ಪರ ಶ್ರೀ.ಎ.ಸಿ.ಪಿ ವಕೀಲರಿಂದ**

ನಿಪಿ–8 ರ ಮೇಲೆ ನಾನು ಸಹಿ ಮಾತ್ರ ಮಾಡಿದ್ದೇನೆ ಆದರೆ ಯಾವಾಗ ಮಾಡಿದ್ದೇನೆ ಎಂದು ನೆನಪಿರುವುದಿಲ್ಲ. ನಿಪಿ–1 ಮತ್ತು 2 ರ ಫೋಟೋದಲ್ಲಿ ಲ್ಯಾಪ ಟಾಪ್ ಅಥವಾ ಮಶೀನ ಕಾಣುತ್ತಿಲ್ಲ ಎನ್ನುವುದು ಸರಿ. ಪೋಲೀಸರು ಖಾಲಿ ಕಾಗದದ ಮೇಲೆ ನನ್ನ ಸಹಿಯನ್ನು ಮಾಡಿಸಿಕೊಂಡಿದ್ದಾರೆ. ಚಾಸಾಃ 1 ಮಹಾದೇವಿಯವರ ಮನೆ, ಚಾಸಾಃ 7 ಚಿದಾನಂದ ರವರ ಮನೆಯ ನಂಬರ ನನಗೆ ಗೊತ್ತಿರುವುದಿಲ್ಲ.

2. ಮಹಾದೇವಿಯವರ ಮನೆ ಮುಂದೆ ಮತ್ತು ಚಿದಾನಂದ ರವರ ಮನೆಯ ಮುಂದೆ ಫೋಟೊವನ್ನು ತೆಗೆದಿರುವುದಿಲ್ಲ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: 1 ರಿಂದ 3, ನೇ ಆರೋಪಿತರ ಪರ ಶ್ರಿ.ಆರ್.ಸಿ.ಪಿ ವಕೀಲರಿಂದ ಮತ್ತು 4, 7, 9 ರಿಂದ 13 ನೇ ಆರೋಪಿತರ ಪರ ಶ್ರಿ.ಎಸ್.ಬಿ.ಆರ್ ವಕೀಲರಿಂದ**

1 ರಿಂದ 3 ನೇ ಆರೋಪಿತರ ಪರ ವಕೀಲರು ಮತ್ತು 7, 9 ರಿಂದ 13 ನೇ ಆರೋಪಿತರ ಪರ ವಕೀಲರು ಶ್ರೀ.ಎ.ಸಿ.ಪಿ ವಕೀಲರು ಮಾಡಿರುವ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.